**O.S. 4/2020** **DW-1**

ಪ್ರಮಾಣೀಕರಿಸಲಾದ ದಿನಾಂಕಃ **08.10.2025.**

ಪಾಟೀ ಸವಾಲು ವಾದಿ ಪರ ಶ್ರೀ. ಕೆ. ಪಿ. ಬಿ ವಕೀಲರಿಂದಃ

ನಾನು ಡಿಗ್ರಿ ಓದಿದ್ದೇನೆ. ನನಗೆ ವಾದಿ ಗೊತ್ತು. ನನಗೆ ಮಂಚಳ್ಳಿ ಗ್ರಾಮ ಸರ್ವೆ 79 ರಲ್ಲಿ 3 ಎಕರೆ ಗದ್ದೆ ಇದೆ, ಈಗ ತೋಟ ಕಾಫಿ, ಅಡಿಕೆ ಮತ್ತು ಸಿಲ್ವರ್ ತೋಟವಾಗಿರುತ್ತದೆ. ನನ್ನ ತಂದೆ ಈ ಆಸ್ತಿಯನ್ನು ತಿತಿರ ಕುಟುಂಬದಿಂದ 1998 ರಲ್ಲಿ ಖರೀದಿಸಿರುತ್ತಾರೆ. ದಾವಾಸ್ತಿ ಈ ಆಸ್ತಿಯ ಪಕ್ಕದಲ್ಲಿದೆ ಎಂದರೆ ಸರಿ. ದಾವಾಸ್ತಿ ವಾದಿಯು ಖರೀದಿಸಿರುತ್ತಾರೆ, ಈ ಆಸ್ತಿ ಮತ್ತು ನನ್ನ ಆಸ್ತಿ ಒಂದೇ ದಿನ ಖರೀದಿ ಆಗಿರುತ್ತದೆ. ಖರೀದಿಸಿದ ಆಸ್ತಿಗಳು ಅವರವರ ಸ್ವಾದೀನದಲ್ಲಿದ್ದು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿ. ನಮ್ಮ ಜಮೀನಿಗೆ ಬೇಲಿ ಹಾಕಿರುತ್ತೇವೆ. ವಾದಿಗೆ ಖರೀದಿಸಿದ 1 ಎಕರೆ ಜಮೀನಿನ ಮೇಲೆ ನನಗೆ ಹಕ್ಕಿಲ್ಲ, ಮುಂದುವರೆದು ವಾದಿ ಈಗ ಒತ್ತುವರಿ ಎಂದು ಕೇಳುತ್ತಿರುವ ಜಾಗ ಅದು ನಮ್ಮ ಸ್ವಾದೀನದಲ್ಲಿರುತ್ತದೆ, ನನ್ನ ತಂದೆ ಕಾಲದಿಂದಲೂ ಈ ಒತ್ತುವರಿ ಆಗಿದೆ ಎಂದು ಹೇಳುವ ಜಾಗ ನಮ್ಮ ಸ್ವಾದೀನದಲ್ಲಿದೆ. ನಾನು ಹೇಳಿದಂತೆ ಒತ್ತುವರಿ ಆದ ಜಾಗ ನನ್ನ 3 ಎಕರೆ ಜಾಗದಲ್ಲಿಲ್ಲ ಎಂದರೆ ಸರಿಯಲ್ಲ. ವಾದಿ ದಾವಾಸ್ತಿಯನ್ನು ಹದ್ ಬಸ್ತು ಮಾಡಿಸಿರುತ್ತಾರೆ, ನೋಟೀಸ್ ಕೂಡ ಬಂದಿರುತ್ತದೆ, ಆಗ ನಾನು ಇರಲಿಲ್ಲ. ಹದ್ ಬಸ್ತು ನ ವರದಿ ನಾನು ನೋಡಿಲ್ಲ. ಹದ್ ಬಸ್ತ್ ನಂತೆ ನಾನು ದಾವಾಸ್ವತ್ತಿನ ಜಮೀನಿನಲ್ಲಿ 26 ಸೆಂಟ್ ಒತ್ತುವರಿ ಮಾಡಿದ್ದೇನೆ ಎಂದು ವರದಿ ಕೊಟ್ಟಿರುವುದು ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ಒತ್ತುವರಿಯಾಗಿರುವ ಜಾಗ ಕ್ರಯಪತ್ರದಂತೆ ವಾದಿಯ ಮಾಲೀಕತ್ವಕ್ಕೆ ಒಳಗೊಂಡಿರುತ್ತದೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**sd/-**
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ